2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 13412 ಃ 2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಕಿರಣ್ | ಸಿ ಡಬ್ಲ್ಯು | 6 |
| ತಂದೆಯ ಹೆಸರು | ನಾಗರೆಡ್ಡಿ | ಪಿ ಡಬ್ಲ್ಯು | 7 |
| ವಯಸ್ಸು | 37 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸಸ್ಥಾನ | ಜಯನಗರ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 01.09.2025.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ಸಾಕ್ಷಿ ನಿಪಿ 2 ರಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2ಡಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ01.09.2018 ರಂದು ಚಾಸಾ 1 ಮತ್ತು ಆರೋಪಿತರ ನಡುವೆ ಆದ ಗಲಾಟೆ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ 1 ರವರ ಮನೆಯ ಹತ್ತಿರ ಬಂದು ಪೊಲೀಸರು ಬೆಳಿಗ್ಗೆ 9.00 ರಿಂದ 11.00 ಗಂಟೆಯವರೆಗೆ ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸ್ಥಳದಲ್ಲಿ ಚಾಸಾ 5 ರವರು ಸಹ ಹಾಜರಿದ್ದರು.

ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಎಂದು ಹಿರಿಯ ಸ.ಸ.ಅ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು ಅವರಿಗೆ ಅನುಮತಿ ನೀಡಲಾಯಿತು.

ಎಮ್ ಒ 01 ಅನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡರೆ ಎಂದರೆ ಸರಿಯಲ್ಲ ಚಾಸಾ 1 ರವರು ಪಂಚನಾಮೆಗೆ ಜಾಗ ತೋರಿಸಿದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಮ್ಮ ಮನೆಯಿಂದ ಘಟನೆ ನಡೆದ ಸ್ಥಳವು 1 ಕಿ.ಮೀ ಅಂತರದಲ್ಲಿ ಇದೆ. ನನ್ನ ದ್ವಿ ಚಕ್ರ ವಾಹನ ಸರ್ವೀಸ್ ಗೆ ಬಿಟ್ಟಿದ್ದು ತೆಗೆದುಕೊಂಡು ಹೋಗಲು ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ದೂರುದಾರರ 2ನೇ ಮಗ ಮತ್ತು ನಾನು ಒಂದೇ ಸ್ಕೂಲ್ ನಲ್ಲಿ ಕಲಿತವರು ಎಂದರೆ ಸರಿ. ಗಲಾಟೆ ಆದ ದಿನಾಂಕದಂದು ನಾನು ಠಾಣೆಗೆ ಹೋಗಿದ್ದೆ. ನಾನು ಠಾಣೆಯಲ್ಲಿಯೇ ಮಹಜರ್ ಗೆ

ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಗ ನನ್ನ ಸ್ನೇಹಿತನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)

2ನೇ ಅ ಮು ನ್ಯಾ ದಂ.